# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ವಿವಿಧ ವರ್ಗದ ಚಾಲಕರು ಮತ್ತು ವಾಹನ ಚಾಲನಾ ತರಬೇತಿದಾರರಿಗೆ ಪುನಶ್ಚೇತನ ತರಬೇತಿ ನೀಡುವ ಬಗ್ಗೆ – ಆದೇಶ.

**ಓದಲಾಗಿದೆ:** ಸಾರಿಗೆ ಆಯುಕ್ತರ ಪತ್ರ ಸಂಖ್ಯೆ:ಸಾಆ/ಪೀಕ–3/ಪಿಆರ್–6/2011–12, ದಿನಾಂಕ: 15–04–2015.

*****

**ಪ್ರಸ್ತಾವನೆ:**

ಮೇಲೆ ಓದಲಾದ ಸಾರಿಗೆ ಆಯುಕ್ತರ ಪತ್ರದಲ್ಲಿ ಬೆಂಗಳೂರಿನ ಸಿಂಗನಾಯಕನಹಳ್ಳಿ ಮತ್ತು ಧಾರವಾಡ ಗಾಮನಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ ಭಾರಿ ವಾಹನ ಚಾಲಕರ ತರಬೇತಿ ಸಂಸ್ಥೆಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮುಖಾಂತರ ಅನುಷ್ಠಾನಗೊಳಿಸಲು ಸರ್ಕಾರವು ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತದೆ. ಸದರಿ ತರಬೇತಿ ಸಂಸ್ಥೆಗಳನ್ನು ನಡೆಸಲು ಮೆ: ಅಶೋಕ್ ಲೆಲ್ಯಾಂಡ್ ಸಂಸ್ಥೆಯೊಂದಿಗೆ ನೋಂದಾಯಿತ ಸೊಸೈಟಿಯೊಂದನ್ನು ಸ್ಥಾಪಿಸಿದ್ದು, ಇದಕ್ಕೆ ಸಾರಿಗೆ ಆಯುಕ್ತರು ಅಧ್ಯಕ್ಷರಾಗಿರುತ್ತಾರೆ. ಸದರಿ ಸಂಸ್ಥೆಗಳಲ್ಲಿ ವಾಹನಗಳ ಚಾಲಕರಿಗೆ ಈ ಕೆಳಕಂಡ ಕೋರ್ಸ್‌ಗಳನ್ನು ಕಡ್ಡಾಯಗೊಳಿಸಲು ದಿನಾಂಕ: 05–12–2014 ರಂದು ನಡೆದ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ.

1) **"ಅಪಾಯಕಾರಿ ಸರಕುಗಳ ಸುರಕ್ಷಿತ ಸಾಗಣೆ" ಒಂದು ದಿನದ ಪುನಶ್ಚೇತನ ತರಬೇತಿ.**
2) **"ಅಪಾಯಕಾರಿ ಸರಕುಗಳ ಸುರಕ್ಷಿತ ಸಾಗಣೆ" ಮೂರು ದಿನಗಳ ಮೂಲ ಚಾಲನಾ ತರಬೇತಿ.**
3) **ವಾಹನ ಚಾಲನಾ ತರಬೇತಿ ಸಂಸ್ಥೆಯ ಚಾಲಕರು ಮತ್ತು ಶಿಕ್ಷಕರಿಗೆ ಒಂದು ದಿನದ ಪುನಶ್ಚೇತನ ತರಬೇತಿ.**
4) **ಶಿಕ್ಷಣ ಸಂಸ್ಥೆಯ ವಾಹನಗಳ ಚಾಲಕರಿಗೆ ಒಂದು ದಿನದ ಪುನಶ್ಚೇತನ ತರಬೇತಿ.**
5) **ಭಾರಿ ವಾಹನ ಚಾಲನಾ ಅನುಜ್ಞಾಪತ್ರ ನವೀಕರಣಕ್ಕಾಗಿ ಬರುವವರಿಗೆ ಒಂದು ದಿನದ ಪುನಶ್ಚೇತನ ತರಬೇತಿ.**

ಮೇಲ್ಕಂಡ ತರಬೇತಿಗಳನ್ನು ನಿಗದಿತ ಶುಲ್ಕವನ್ನು ಪಾವತಿಸಿ ತರಬೇತಿ ಪಡೆಯುವುದನ್ನು ಕಡ್ಡಾಯಗೊಳಿಸಿ ಸರ್ಕಾರದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸಾರಿಗೆ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ: ಸಾರಿಇ 19 ಸಾಇಪ 2014
## ಬೆಂಗಳೂರು, ದಿನಾಂಕ: 16–05–2015.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಬೆಂಗಳೂರಿನ ಸಿಂಗನಾಯಕನಹಳ್ಳಿ ಮತ್ತು ಧಾರವಾಡದ ಗಾಮನಗಟ್ಟಿಗಳಲ್ಲಿನ ಭಾರಿ ವಾಹನ ಚಾಲಕರ ತರಬೇತಿ ಸಂಸ್ಥೆಗಳಲ್ಲಿ ವಿವಿಧ ವರ್ಗದ ಚಾಲಕರು ಕೆಳಗೆ ತೋರಿಸಿರುವಂತೆ ನಿಗದಿತ ಶುಲ್ಕವನ್ನು ಪಾವತಿಸಿ ತರಬೇತಿ ಪಡೆಯುವುದನ್ನು ಕಡ್ಡಾಯಗೊಳಿಸಿ ಸರ್ಕಾರವು ಆದೇಶಿಸಿದೆ.

| ಕ್ರ ಸಂ | ಪುನಶ್ಚೇತನ ತರಬೇತಿಗಳು | ಅವಧಿ | ತರಬೇತಿ ಫಲಾನುಭವಿಗಳು | ಶುಲ್ಕ (ರೂ.ಗಳಲ್ಲಿ) |
|---|---|---|---|---|
| 1 | ಅಪಾಯಕಾರಿ ಸಾಮಗ್ರಿ ಸಾಗಾಣಿಕೆಯ ವಾಹನಗಳು | ಒಂದು ದಿನ | ಚಾಲಕರು (ಟ್ಯಾಂಕರ್ / ರಾಸಾಯನಿಕ ಸಾಗಾಣಿಕೆ) | 400 |
| 2 | ಅಪಾಯಕಾರಿ ಸಾಮಗ್ರಿ ಸಾಗಾಣಿಕೆಯ ವಾಹನಗಳು | ಒಂದು ದಿನ | ಚಾಲಕರಿಗೆ (ಒಂದು ವರ್ಷದ ನಂತರ ಅನುಜ್ಞಾ ಪತ್ರ ನವೀಕರಣ) | 400 |

| | | | | |
|---|---|---|---|---|
| 3 | ಭಾರಿ / ಮಧ್ಯಮ ಮೋಟಾರು ವಾಹನ (ಸಾರಿಗೆ) | ಒಂದು ದಿನ | ಅನುಜ್ಞಾ ಪತ್ರ ನವೀಕರಣಕ್ಕಾಗಿ | 400 |
| 4 | ಶೈಕ್ಷಣಿಕ ಸಂಸ್ಥೆಯ ವಾಹನಗಳು (ಸಾರಿಗೆ) | ಒಂದು ದಿನ | ಶೈಕ್ಷಣಿಕ ಸಂಸ್ಥೆಯ ವಾಹನ ಚಾಲಕರುಗಳಿಗೆ | 400 |
| 5 | ಭಾರಿ / ಮಧ್ಯಮ ಮೋಟಾರು ವಾಹನ (ಸಾರಿಗೆ) | ಒಂದು ದಿನ | ವಾಹನ ಚಾಲನಾ ತರಬೇತಿ ಶಾಲೆಯ ತರಬೇತುದಾರರಿಗೆ | 400 |

ಮೇಲ್ಕಂಡ ಶುಲ್ಕವು ಮಧ್ಯಾಹ್ನದ ಊಟ ಮತ್ತು ಬೆಳಿಗ್ಗೆ ಹಾಗೂ ಸಂಜೆಯ ಚಹಾ / ಕಾಫಿ ಶುಲ್ಕವನ್ನು ಒಳಗೊಂಡಿರುತ್ತದೆ (ಸೇವಾ ಶುಲ್ಕ ಪ್ರತ್ಯೇಕ).

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ಬೀರೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

<u>ಇವರಿಗೆ,</u>

1. ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಟಿಟಿಎಂಸಿ ಸಂಕೀರ್ಣ, ಶಾಂತಿನಗರ, ಬೆಂಗಳೂರು.
2. ಅಪರ ಸಾರಿಗೆ ಆಯುಕ್ತರು (ಆಡಳಿತ), ಸಾರಿಗೆ ಆಯುಕ್ತರ ಕಛೇರಿ, ಶಾಂತಿನಗರ, ಬೆಂಗಳೂರು.
3. ಪ್ರಾದೇಶಿಕ ಸಾರಿಗೆ ಅಧಿಕಾರಿ, ಪ್ರಾದೇಶಿಕ ಸಾರಿಗೆ ಕಛೇರಿ, ಯಲಹಂಕ.
4. ಪ್ರಾದೇಶಿಕ ಸಾರಿಗೆ ಅಧಿಕಾರಿ, ಪ್ರಾದೇಶಿಕ ಸಾರಿಗೆ ಕಛೇರಿ, ಧಾರವಾಡ.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.